# ಸ್ವಚ್ಛ ನೋಟು ನೀತಿ: ಆರ್‌ಬಿಐ

## ಡಿಸೆಂಬರ್ 5, 2002

ಭಾರತೀಯ ರಿಸರ್ವ್ ಬ್ಯಾಂಕಿನ ಡೆಪ್ಯುಟಿ ಗವರ್ನರ್ ಶ್ರೀ ವೇಪಾ ಕಾಮೇಶಮ್ ಅವರು 2001ರ ನವೆಂಬರ್‌ನಲ್ಲಿ ರಿಸರ್ವ್ ಬ್ಯಾಂಕ್ ಕರೆನ್ಸಿ ನೋಟುಗಳ ಬಾಳಿಕೆ ಅವಧಿಯನ್ನು ಹೆಚ್ಚಿಸಲು ನೋಟುಗಳ ಕಟ್ಟುಗಳಿಗೆ ಪಿನ್ನುಗಳನ್ನು ಹಾಕುವುದನ್ನು ಬಿಟ್ಟು ಕಟ್ಟುಗಳನ್ನು ಕಾಗದದ/ಪಾಲಿಥೀನ್‌ನ ಬ್ಯಾಂಡುಗಳಿಂದ ಬಂಧಿಸುವಂತೆ ಹೊರಡಿಸಿದ ಸೂಚನೆಗಳನ್ನು ಅನುಷ್ಠಾನಗೊಳಿಸುವಂತೆ ಬ್ಯಾಂಕುಗಳಿಗೆ ಸೂಚನೆ ನೀಡಿದರು. ಡೆಪ್ಯುಟಿ ಗವರ್ನರ್ ಅವರು, ಕರೆನ್ಸಿ ಚೆಸ್ಟ್‌ಗಳನ್ನು ಹೊಂದಿರುವ ಸಾರ್ವಜನಿಕ ವಲಯದ ಬ್ಯಾಂಕುಗಳ ಮತ್ತು ಇತರ ಬ್ಯಾಂಕುಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳನ್ನು, ಭಾರತೀಯ ರಿಸರ್ವ್ ಬ್ಯಾಂಕಿನ ಸ್ವಚ್ಛ ನೋಟು ನೀತಿಯ ಅನುಷ್ಠಾನದ ಬಗ್ಗೆ ಚರ್ಚೆ ಮಾಡುವುದಕ್ಕಾಗಿ ದೆಹಲಿಯಲ್ಲಿ ಕರೆದಿದ್ದರು. ರಿಸರ್ವ್ ಬ್ಯಾಂಕಿನ ಸ್ವಚ್ಛ ನೋಟು ನೀತಿಯ ಉದ್ದೇಶವೆಂದರೆ ಕೊಳೆಯಾದ ನೋಟುಗಳನ್ನು ಚಲಾವಣೆಯಿಂದ ಹಿಂತೆಗೆದುಕೊಂಡು ನಾಗರೀಕರಿಗೆ ಉತ್ತಮ ಗುಣಮಟ್ಟದ ಕರೆನ್ಸಿ ನೋಟುಗಳನ್ನು ಮತ್ತು ನಾಣ್ಯಗಳನ್ನು ಒದಗಿಸುವುದು. ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದ ಸ್ವಚ್ಛ ನೋಟುಗಳನ್ನು ಮಾತ್ರವೇ ನೀಡಬೇಕೆಂದು ಮತ್ತು ಅವರಿಂದ ಸ್ವೀಕರಿಸಿದ ಕೊಳೆಯಾದ ನೋಟುಗಳನ್ನು ಕೌಂಟರುಗಳಲ್ಲಿ ಮತ್ತೆ ಚಲಾವಣೆಗೆ ಬಿಡಬಾರದೆಂದು ಸಹ ಬ್ಯಾಂಕುಗಳಿಗೆ ಸೂಚನೆ ನೀಡಿದೆ. ರಿಸರ್ವ್ ಬ್ಯಾಂಕು, ಕರೆನ್ಸಿ ನೋಟುಗಳ ಕೆಲಸ ನಿರ್ವಹಣೆಗೆ ತನ್ನ ಎಲ್ಲ ಕಚೇರಿಗಳಲ್ಲಿ ಅತ್ಯಧಿಕ ವೇಗದ ಕರೆನ್ಸಿ ಪರಿಶೀಲನಾ ಮತ್ತು ಸಂಸ್ಕರಣಾ ವ್ಯವಸ್ಥೆಯಿರುವ ಯಂತ್ರಗಳನ್ನು ಸ್ಥಾಪಿಸಿದೆ. ಈ ಯಂತ್ರಗಳು ಒಂದು ಗಂಟೆಗೆ 50,000 ದಿಂದ 60,000 ನೋಟುಗಳನ್ನು ಸಂಸ್ಕರಿಸುವ ಸಾಮರ್ಥ್ಯವನ್ನು ಹೊಂದಿವೆ ಮತ್ತು ಏಕಕಾಲಕ್ಕೆ ಕೊಳೆಯಾದ ನೋಟುಗಳನ್ನು ಯಂತ್ರದ ಮೂಲಕ ಚೂರು ಚೂರು ಮಾಡಿ ಗಟ್ಟಿಗಳನ್ನಾಗಿ ಮಾಡಲಾಗುತ್ತದೆ.

1999ರಿಂದ, ಗವರ್ನರ್ ಅವರು ಸ್ವಚ್ಛ ನೋಟು ನೀತಿಯನ್ನು ಪ್ರಕಟಿಸಿದಾಗಿನಿಂದ, ಕರೆನ್ಸಿ ನೋಟುಗಳು ಮತ್ತು ನಾಣ್ಯಗಳ ಸರಬರಾಜನ್ನು ಹೆಚ್ಚಿಸಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕರೆನ್ಸಿ ನೋಟುಗಳ ಮೇಲೆ ಬರೆಯದಂತೆ ಸಾರ್ವಜನಿಕರನ್ನು ಒತ್ತಾಯಿಸಲಾಯಿತು ಹಾಗೂ ಕೊಳೆಯಾದ ಮತ್ತು ಹರಿದ ನೋಟುಗಳನ್ನು ಬದಲಾಯಿಸಿಕೊಳ್ಳಲು ಅನಿರ್ಬಂಧಿತ ಸೌಲಭ್ಯವನ್ನು ಒದಗಿಸುವಂತೆ ಬ್ಯಾಂಕುಗಳಿಗೆ ಸೂಚಿಸಲಾಯಿತು. ರಿಸರ್ವ್ ಬ್ಯಾಂಕಿನ ಸೂಚನೆಗಳ ಪ್ರಕಾರ, ಬ್ಯಾಂಕುಗಳ ಕರೆನ್ಸಿ ಚೆಸ್ಟ್ ಶಾಖೆಗಳು ತಮ್ಮ ಗ್ರಾಹಕರಲ್ಲದವರಿಗೂ ಸಹ ಕೊಳೆಯಾದ ಮತ್ತು ಹರಿದ ನೋಟುಗಳಿಗೆ ಬದಲಾಗಿ ಒಳ್ಳೆಯ ಗುಣಮಟ್ಟದ ನೋಟುಗಳನ್ನು ಮತ್ತು ನಾಣ್ಯಗಳನ್ನು ಕೊಡಬೇಕು. ಆದರೆ ಈ ಬಗ್ಗೆ ಸಾರ್ವಜನಿಕರಿಂದ ಮತ್ತು ವ್ಯಾಪಾರಿ ಸಂಸ್ಥೆಗಳಿಂದ ಈ ಸೂಚನೆಗಳನ್ನು ಪೂರ್ಣವಾಗಿ ಪಾಲಿಸಿಲ್ಲವೆಂಬ ಬಗ್ಗೆ ದೂರುಗಳು ಬರುವುದು ಮುಂದುವರಿದೇ ಇದೆ.

ನಿರ್ಬಂಧಿತ ವ್ಯವಹಾರದ ಬಗ್ಗೆ ಕೆಲವು ದೂರುಗಳನ್ನು ಸ್ವೀಕರಿಸಲಾಗುತ್ತಿದೆ. ಅವುಗಳ ಪ್ರಕಾರ ಗ್ರಾಮೀಣ ಮತ್ತು ಅರೆ ನಗರ ಪ್ರದೇಶಗಳಲ್ಲಿ ಕೆಲವು ಕರೆನ್ಸಿ ಚೆಸ್ಟ್ ಶಾಖೆಗಳು ಕಡಿಮೆ ಮುಖ ಬೆಲೆಯ ನೋಟುಗಳನ್ನು ಸ್ವೀಕರಿಸುತ್ತಿಲ್ಲ. ಈ ಪರಿಸ್ಥಿತಿಯನ್ನು ಕಡಿಮೆ ಮಾಡಲು, ರಿಸರ್ವ್ ಬ್ಯಾಂಕು

ಈ ಕರೆನ್ಸಿ ಚೆಸ್ಟ್‌ಗಳಿಗೆ ನಾಣ್ಯಗಳನ್ನು ವಿತರಿಸಲು ನಿರ್ದಿಷ್ಟ ಮಾಸಿಕ ಗುರಿಯನ್ನು ನಿಗದಿಪಡಿಸಿದೆ. ರಿಸರ್ವ್ ಬ್ಯಾಂಕು, ಅವುಗಳಿಂದ ಪಡೆದ ವರದಿಗಳಿಂದ ಈ ಗುರಿಗಳ ಬಗ್ಗೆ ಮೇಲ್ವಿಚಾರಣೆ ನಡೆಸುತ್ತದೆ. ಇದಲ್ಲದೆ ಪ್ರಾಯೋಗಿಕ ಆಧಾರದ ಮೇಲೆ, ರಿಸರ್ವ್ ಬ್ಯಾಂಕು ಈ ವರ್ಷದ ಸೆಪ್ಟೆಂಬರ್ ಮತ್ತು ನವೆಂಬರ್ ತಿಂಗಳುಗಳ ನಡುವೆ ಕರೆನ್ಸಿಯ ಮೌಲ್ಯದ ವಿನಿಮಯ, ಕಡಿಮೆ ನಾಣ್ಯಗಳ ವಿತರಣೆಗಾಗಿ ಮಾತ್ರವೇ ಅವಕಾಶ ಕಲ್ಪಿಸಲು ಆಯ್ದ ಕೇಂದ್ರಗಳಲ್ಲಿ ಒಂದು ತಿಂಗಳಲ್ಲಿ ಒಂದು ಭಾನುವಾರದಂದು ಒಂದು ಕರೆನ್ಸಿ ಚೆಸ್ಟ್ ಅನ್ನು ತೆರೆದಿರುವಂತೆ ಮತ್ತು ಹಾಳಾದ ನೋಟುಗಳನ್ನು ಹಿಂತೆಗೆದುಕೊಳ್ಳುವಂತೆ ಬ್ಯಾಂಕುಗಳನ್ನು ಕೋರಲಾಗಿತ್ತು. ಬ್ಯಾಂಕುಗಳಿಂದ ಪಡೆದ ವರದಿಗಳು ಈ ಪ್ರಯೋಗ ಸಾರ್ವಜನಿಕರಿಂದ ಅದ್ಭುತ ಪ್ರತಿಕ್ರಿಯೆಯನ್ನು ಗಳಿಸಿತೆಂಬುದನ್ನು ತೋರಿಸಿವೆ. ಆದ್ದರಿಂದ ಈ ಯೋಜನೆಯನ್ನು ಶಾಶ್ವತವಾದ ಆಧಾರದ ಮೇಲೆ ಪೂರ್ಣ ಮನಸ್ಸಿನ ಭಾಗವಹಿಸುವಿಕೆಯಿಂದ ಬ್ಯಾಂಕುಗಳು ಮುಂದುವರಿಸಬೇಕೆಂದು ನಿರ್ಧರಿಸಲಾಗಿದೆ, ಕೇಂದ್ರದ ಆಯ್ಕೆ ಮತ್ತು ತಿಂಗಳಲ್ಲಿ ಭಾನುವಾರದ ಆಯ್ಕೆಯನ್ನು ಆಯಾ ಬ್ಯಾಂಕುಗಳ ನಿರ್ಧಾರಕ್ಕೆ ಬಿಡಬೇಕೆಂದು ನಿರ್ಧರಿಸಲಾಗಿದೆ.

ಡೆಪ್ಯುಟಿ ಗವರ್ನರ್ ಅವರು ಚೆಸ್ಟ್ ಶಾಖೆಗಳು ಮತ್ತು ಚೆಸ್ಟ್ ಇಲ್ಲದ ಶಾಖೆಗಳ ನಡುವೆ ಅತ್ಯುನ್ನತ ಮಟ್ಟದಲ್ಲಿ ಸಹಕಾರವಿರಬೇಕೆಂಬುದನ್ನು ಒತ್ತಿ ಹೇಳಿದರು ಮತ್ತು ಕರೆನ್ಸಿ ಚೆಸ್ಟ್ ಶಾಖೆಗಳೂ ಸಹ ಬ್ಯಾಂಡಿಂಗ್ ಯಂತ್ರಗಳೊಡನೆ ಸಣ್ಣ ಡೆಸ್ಕ್‌ಟಾಪ್‌ಗಳನ್ನು ಅಳವಡಿಸಿಕೊಳ್ಳುವ ಮೂಲಕ ತಮ್ಮ ಕಾರ್ಯಾಚರಣೆಯನ್ನು ಯಾಂತ್ರೀಕೃತಗೊಳಿಸಲು ಇದು ಸಕಾಲವೆಂದು ಮತ್ತು ಇದರಿಂದ ಸಾರ್ವಜನಿಕರೂ ಪಿನ್ನು ಹಾಕಿಲ್ಲದ ಉತ್ತಮ ಸ್ಥಿತಿಯಲ್ಲಿರುವ ನೋಟುಗಳನ್ನು ಪಡೆಯಬಹುದೆಂದೂ, ಹಾಗೆಯೇ ರಿಸರ್ವ್ ಬ್ಯಾಂಕೂ ಸಹ ಸಂಸ್ಕರಣೆಗೆ ಮತ್ತು ನಾಶಗೊಳಿಸಲು ಸಿದ್ಧವಿರುವ ಪಿನ್ನುಮಾಡದ ಕೊಳೆಯಾದ ನೋಟುಗಳನ್ನು ಪಡೆಯುವುದೆಂದೂ ತಿಳಿಸಿದರು. ಅಲ್ಲದೆ ರಿಸರ್ವ್ ಬ್ಯಾಂಕಿನ ಪ್ರಾದೇಶಿಕ ನಿರ್ದೇಶಕರನ್ನು ನೋಟುಗಳು ಮತ್ತು ನಾಣ್ಯಗಳ ರವಾನೆಯ ಸರಿಯಾದ ಸಮನ್ವಯಕ್ಕೆ ಸಂಪರ್ಕಿಸಬಹುದೆಂದೂ ತಿಳಿಸಿದರು. ರಿಸರ್ವ್ ಬ್ಯಾಂಕಿನ ಸ್ವಚ್ಛ ನೋಟು ನೀತಿಯ ಅನುಷ್ಠಾನದಲ್ಲಿ ಬ್ಯಾಂಕುಗಳು ಪೂರ್ಣ ಸಹಕಾರ ನೀಡುತ್ತದೆಂದು ಮತ್ತು ಈ ಉದ್ದೇಶಕ್ಕಾಗಿ ಯಾವುದೇ ನಿಯಂತ್ರಣ ಕ್ರಮ ಕೈಗೊಳ್ಳಬೇಕಾಗಿ ಬರುವುದಿಲ್ಲವೆಂದು ಅವರು ಆಶಿಸಿದರು.

ಅಲ್ಪನಾಕಿಲ್ಲಾವಾಲಾ
ಪ್ರಧಾನ ವ್ಯವಸ್ಥಾಪಕರು.

ಪತ್ರಿಕಾ ಪ್ರಕಟಣೆ ಸಂ.: 2002–2003/589